# ಶಾಂತಿಕಿರಣ

ಬಸವಾದಿ ಶರಣರ ತತ್ವಪ್ರಸಾರಕ್ಕೇ ಮೀಸಲು



ದೆಹಲಿಯಲ್ಲಿ ಮಾಜಿ ರಾಷ್ಟ್ರಪತಿ ಜೇಲಸಿಂಗ ಅವರು ಪೂಜ್ಯ ಚನ್ನಬಸವ ಪಟ್ಟದ್ದೇವರೊಡನೆ ಕುಶಲ ಸಂಭಾಷಣೆ ನಡೆಸಿದ್ದಾರೆ (೧೯೯೦)

ಭಾಲ್ಕಿ ಹಿರೇಮಠ-ಸಂಸ್ಥಾನದ ದ್ವೈಮಾಸಿಕ ಪತ್ರಿಕೆ

# ಸಂಗನ ಶ್ರೀ ಚರಣದ ಮೇಲೆ ಬಿದ್ದರಳಿದ ವಿಶ್ವಹೃದಯ ಪುಷ್ಪ

—ಡಾ॥ ಸಿದ್ಧಯ್ಯ ಪುರಾಣಿಕ

ಹೂ ಅರಳಿದಾಗೊಮ್ಮೆ ಬಳ್ಳಿಯಬಾಳಿಗೆ ಧನ್ಯತೆ ದೊರೆಯುತ್ತದೆ; ಏಕೆ? ಅದರ ಹೃದಯದಲ್ಲಿರುವ ಪರಿಮಳ ಹೊರ ಹೊಮ್ಮಲು ಹೂಗಳು ಹಾದಿ ಮಾಡಿಕೊಡುತ್ತವೆ.

ಹಾಗೆಯೇ ವಿಶ್ವಹೃದಯ ಪುಷ್ಪ ಅರಳಿದಾಗೊಮ್ಮೆ ಭೂಮಿಯ ಬಾಳಿಗೆ ಧನ್ಯತೆ ದೊರೆಯುತ್ತದೆ. ವಿಶ್ವಹೃದಯ ಪುಷ್ಪ ಅರಳುವುದೆಂದರೇನು? ವಿಶ್ವವಿಭೂತಿಯೊಬ್ಬನ ಉದಯವೇ ವಿಶ್ವಹೃದಯ ಪುಷ್ಪದ ಅರಳಿಕೆ. ಆಗ ವಿಶ್ವವೂ ತನ್ನ ಅಂತರಂಗದ ಪರಿಮಳವನ್ನು ಸುತ್ತೆಲ್ಲ ಸೂಸುತ್ತದೆ, ಧನ್ಯತೆಯನ್ನು ಅನುಭವಿಸುತ್ತದೆ.

ಬಸವಣ್ಣನವರು ಭುವಿಗಿಳಿದಾಗ ಇಂಥದೊಂದು ವಿಶ್ವಹೃದಯ ಪುಷ್ಪ ಅರಳಿದುದರ ಅನುಭವವಾಯಿತು, ಮನುಕುಲಕ್ಕೆ ಅಣ್ಣನವರ ವಚನದಲ್ಲಿಯೇ ಇದಕ್ಕೆ ಸೂಚನೆ ಸಿಗುತ್ತದೆ.

"ಎದೆ ಬಿರಿವನ್ನಕ್ಕ ಮನದಣಿವನ್ನಕ್ಕ
ನಾಲಿಗೆ ನಲಿದಾಡುವನ್ನಕ್ಕ
ನಿಮ್ಮ ನಾಮಾಮೃತವ ತಂದಿರಿಸುಕಂಡಯ್ಯ ಎನ್ನ ತಂದೆ
ಬಿರಿಮುಗುಳಂದದಿ ಎನ್ನ ಹೃದಯ
ನಿಮ್ಮ ಶ್ರೀ ಚರಣದ ಮೇಲೆ ಬಿದ್ದರಳುಗೆ
ಕೂಡಲಸಂಗಮದೇವಾ"

ಮಾನವ ಹೃದಯ ಹಿಗ್ಗಿ ವಿಶ್ವಹೃದಯವಾಗ ಬಲ್ಲುದೆಂಬುದಕ್ಕೆ ಬಸವಣ್ಣನವರು ಉಜ್ವಲ ಉದಾಹರಣೆಯಾಗಿದ್ದಾರೆ. ಆ ವಿಶ್ವಹೃದಯ ಪುಷ್ಪ ಅರಳಿದಾಗ ಅದರ ದಿವ್ಯ ಸುಗಂಧಕ್ಕೆ ಆಕರ್ಷಿತವಾಗಿ ಅದರ ಪಾವನ ಪರಾಗಕ್ಕೆ ಹಾರೈಸಿ ಅನೇಕ ಶರಣ ಭ್ರಮರಗಳು ದೂರ-ದೂರದಿಂದ ಬಂದ ಆ ಪುಷ್ಪವನ್ನು ಸುತ್ತಿ ಮುತ್ತಿದವು. ಆ ಪುಷ್ಪ ಇಲ್ಲವಾಗಿ ಎಂಟುನೂರು ವರ್ಷಗಳು ಕಳೆದರೂ ಅದರ ಪರಿಮಳ ಕಾಲಕುಂಜದಲ್ಲಿ ವ್ಯಾಪಿಸಿ ನಿಂತಿದೆ. ಅಂದಿನಿಂದ ಇಂದಿನವರೆಗೆ ಆ ಮಕರಂದದಿಂದ ಅನೇಕ ಆತ್ಮ ಮಧುಕರಗಳು ತೃಪ್ತವಾಗಿವೆ ಇನ್ನು ಮುಂದೂ ಅನಂತ ಕಾಲದವರೆಗೆ ತೃಪ್ತಿ ಪಡೆಯುವವು. ಎಲ್ಲ ದುಂಬಿಗಳಿಗೆ ಲಭ್ಯವಲ್ಲ, ದೊರೆಯುವುದಿಲ್ಲ, ಈ ಪರಿಮಳ ಪರಾಗಗಳು ಸಮುದ್ರದೊಳಗಣ ಸಿಂಪಿನಂತೆ ಬಾಯಿ ಬಿಡುವ ಭೃಂಗಗಳಿಗೆ ಮಾತ್ರ ಲಭ್ಯ ಈ ಅಲಭ್ಯ ಮಕರಂದ.

ಈ ಮಕರಂದವನ್ನು ಸವಿವ ದುಂಬಿಗಳ ಸಂಖ್ಯೆ
ಹೆಚ್ಚಲಿ ವರುಷದಿಂದ ವರುಷಕ್ಕೆ!